Sanctioning of an Agricultural College to Tumkur District.

*Q.—700. Smt. G. C. BHAGEERATHAMMA (Tumkur).—

Will the Government be pleased to state :—

whether they have sanctioned an Agricultural College to Tumkur District during 1964-65 ?

A.— Sri H. C. BORAIAH (Parliamentary Secretary to Minister for Agriculture).—

No.

PAPERS LAID ON THE TABLE.

Sri B. D. JATTI (Minister for Finance).—I beg to lay on the Table of the House the Annual Report and Accounts of the Mysore State Financial Corporation for the year ended 31st March 1964 as required under sub-section (3) of Section 38 of the State Financial Corporations Act, 1951, and on behalf of the Minister for Education, I also lay the information as promised in reply to Starred Question No. 537 from the 38th List.

MYSORE PANCHAYAT RAJ BILL, 1964.

Motion to consider

(Debate contd.)

†ಶ್ರೀ ಕೆ.ಎಸ್.ಗೌಡಯ್ಯ(ಕೃಷ್ಣರಾಜನಗರ).—ಮಾನ್ಯ ಸಭಾಪತಿಗಳೇ, 1964ನೇ ಮೈಸೂರು ಪಂಚಾಯ್ತಿ ರಾಜ್ಯ ವಿಧೇಯಕವನ್ನು ಪರಿಶೀಲಿಸುವಾಗ, ನಾನು ಈ ವಿಧೇಯಕವನ್ನು ವಿರೋಧಿಸುತ್ತೇನೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಇದನ್ನು ವಿರೋಧಿಸುತ್ತೇನೆ ಎಂಬುದಾಗಿ ಕೆಲವರು ನನ್ನನ್ನು ಮಂದಗಾಮಿ ಅಥವಾ ಪ್ರತಿಗಾಮಿ ಎಂಬುದಾಗಿ ಕರೆಯಬಹುದು. ಆದರೆ ಈ ವಿಧೇಯಕವನ್ನು ಶಾಸನವನ್ನಾಗಿ ಮಾಡಲಿಕ್ಕೆ ಕಾಲ ಸನ್ನಿಹಿತವಾಗಿಲ್ಲ ಎಂದು ಹೇಳಬೇಕಾಗಿದೆ. ಇದಕ್ಕೆ ಕಾರಣ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಈಗ ಸರಿಯಾಗಿಲ್ಲ. ಈ ಶಾಸನವನ್ನು ಜಾರಿಗೆ ತರಬೇಕಾಗಿ ಬಂದಾಗ ಎಷ್ಟು ಹಣಕಾಸನ್ನು ಒದಗಿಸಬೇಕೋ ಅದನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಈ ಶಾಸನ ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ ಎಂಬುದಾಗಿ ನಾನು ಭಾವಿಸುತ್ತೇನೆ. ಎರಡನೆಯದಾಗಿ 1959ನೆಯ ಇಸವಿ ವಿಲೇಜ್ ಪಂಚಾಯ್ತಿ ಮತ್ತು ತಾಲ್ಲೂಕು ಬೋರ್ಡು ಶಾಸನದ ಪ್ರಕಾರ ಏನು ಪಂಚಾಯ್ತಿಗಳು ಮತ್ತು ತಾಲ್ಲೂಕು ಬೋರ್ಡುಗಳನ್ನು ಸೃಷ್ಟಿಸಿದ್ದೇವೆ ಆ ಸ್ಥಳೀಯ ಸಂಸ್ಥೆಗಳು ಇನ್ನೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆ ಶಾಸನದಲ್ಲಿ ಹೇಳಿರುವ ಏನೇನು ಕಾರ್ಯಕರ್ತರು ಸಿಬ್ಬಂದಿಯನ್ನು ಒದಗಿಸಬೇಕಾಗಿತ್ತೋ ಅದನ್ನು ಇನ್ನೂ ಒದಗಿಸಿಲ್ಲ, ಅವರಿಗೆ ಸರಿಯಾಗಿ ಹಣವನ್ನೂ ಒದಗಿಸಿಲ್ಲ. ಹೀಗೆ ಪಂಚಾಯ್ತಿ, ಸೆಕ್ಕೆಚೆರಿಗಳು ಮತ್ತು ತಾಲ್ಲೂಕು ಬೋರ್ಡಿನ ಸಿಬ್ಬಂದಿಯನ್ನು ಸರಿಯಾಗಿ ಒದಗಿಸದೇ ಈ 5 ವರ್ಷಗಳಲ್ಲಿ ಆ ಸಂಸ್ಥೆಗಳು ಏನೇನು ಕೆಲಸ ಮಾಡಬೇಕಾಗಿದ್ದುವೋ ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲದೇ ಹೋಗಿದೆ. ಹೀಗೆ ಹಿಂದೆ ಇದ್ದ ಒಂದು ಶಾಸನದ ಪ್ರಕಾರ ನಿಯಮಿತವಾಗಿರತಕ್ಕ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡದೇ ಇರುವಾಗ, ಏನು ಸಿಬ್ಬಂದಿ ಕೊಡಬೇಕಾಗಿತ್ತೋ, ಏನು ಹಣಕಾಸನ್ನು ಕೊಡಬೇಕಾಗಿತ್ತೋ ಅದನ್ನು ಒದಗಿಸದೇ ಆ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಲಲ್ಲ ಎಂಬುದು ನರ್ವ